1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಸಿಸಿ ನಂಃ 10101 2012
ಪ್ರಾಸಾ. 2 ಚಾಸಾ.6

ಸಾಕ್ಷಿದಾರರ ಹೆಸರು ಃ ಎನ್ ಎಸ್‌ಆನಂದ್
ತಂದೆಯ ಹೆಸರು ಃ ಶ್ರೀನಿವಾಸನ್
ವಯಸ್ಸು ಃ 42 ವರ್ಷ
ಉದ್ಯೋಗ ಃ ಸಾಫ್ಟ್‌ವೇರ್ ಇಂಜಿನೀಯರ್
ವಾಸ ಃ ಬೆಂಗಳೂರು

ಸಾಕ್ಷಿಯನ್ನು ಕರೆಸಿ ದಿ :- 12.04.2017 ರಂದು ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನನಗೆ ಐಶ್ವರ್ಯ ಪ್ರಾಜೆಕ್ಟ್ ಡೆವೆಲಪರ್‌ಬಗ್ಗೆ ಜಾಹೀರಾತುಗಳ ಮೂಲಕ ತಿಳಿದು ಬಂದಿರುತ್ತದೆ. ನಾನು ಸದರಿ ಪ್ರಾಜೆಕ್ಟ್‌ನವರು ನಿರ್ಮಾಣ ಮಾಡುತ್ತಾರೆನ್ನಲಾದ ದೇವನಹಳ್ಳಿ ಬಳಿ ನಿರ್ಮಿಸುತ್ತಿರುವ ಏರೋಜೋನಾ ಎಂಬ ಪ್ರಾಜೆಕ್ಟ್‌ನಲ್ಲಿ ನಿವೇಶನಸಂಖ್ಯೆ 85 ಮತ್ತು 86ಗಳನ್ನು ಬುಕ್ ಮಾಡಿ ಅದಕ್ಕಾಗಿ ಎರಡು ಚೆಕ್ಕುಗಳ ಮುಖಾಂತರ 6,12,000-00ರೂಗಳನ್ನು ಕೊಟ್ಟಿರುತ್ತೇನೆ. ಸದರಿ ವಿಚಾರಕ್ಕಾಗಿ ಸದರಿ ಡೆವೆಲಪರ್ಸ್‌ಗಳು 'ನನಗೆ ಒಂದು ರಸೀದಿಯನ್ನು ಕೊಟ್ಟು ಕರಾರುಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಸದರಿ ಪ್ರಾಜೆಕ್ಟ್‌ನವರು ಸದರಿ ಸೈಟನ್ನು 6 ತಿಂಗಳ ಒಳಗಾಗಿ ನೋಂದಣಿ ಮಾಡಿಕೊಡುವುದಾಗಿ ಹೇಳಿರುತ್ತಾರೆ, ಅದರೆ, ಮಾಡಿಕೊಟ್ಟಿರುವುದಿಲ್ಲ. ಸದರಿ ವಿಚಾರಕ್ಕಾಗಿ ನಾನು ಸದರಿ ಡೆವಲಪರ್ಸ್‌ರವರನ್ನುಹಲವಾರು ಬಾರಿ ವಿಚಾರಿಸಿದಾಗ ಅವರುಒಂದಿಲ್ಲ ಒಂದು ಕಾರಣಕ್ಕಾಗಿ ಪ್ರಕರಣವನ್ನು ಮುಂದೂಡುತ್ತಾ ಬಂದಿರುತ್ತಾರೆ. ಅದಕ್ಕಾಗಿ ನಾನು ಸಿಸಿಬಿ ಕಚೇರಿಯಲ್ಲಿ ಒಂದು ದೂರನ್ನು ಸದರಿ ಡೆವೆಲಪರ್ಸ್‌ರವರ ವಿರುದ್ಧ ನೀಡಿರುತ್ತೇನೆ. ಸದರಿ

ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಸದರಿ ಮೂಲ ರಸೀದಿ ಹಾಗೂ ಕರಾರು ಪತ್ರಗಳು ನನ್ನ ಹತ್ತಿರ ಇರುತ್ತವೆ.

(ಸಾಕ್ಷಿಯು ಮೂಲ ಕರಾರು ಪತ್ರವನ್ನು ಹಾಜರುಪಡಿಸದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ. ಹೇ. ಕೇ. ಸ. ಇ

1ನೇ ಅ. ಮು. ಮ. ದಂ. ನ್ಯಾ.